# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ) ರವರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು –02.

ಸಂಖ್ಯೆ: ಜಂನಿನಯೋ (ದ)/ಪ್ರಾಪ/ಸನಿ/09 /2022-23 ದಿನಾಂಕ: 24-02-2023.

27 02 2023

ಪ್ರಾರಂಭಿಕ ಪ್ರಮಾಣ ಪತ್ರ

ವಿಷಯ: ಖಾತಾ ಸಂಖ್ಯೆ. 21, ಸರ್ವೆ ನಂ. 40/1, 2, 3, 4, 5, 6 & 41/1, 2, 3, 4, 7, 42/5, ಯಳೇನಹಳ್ಳಿ ಗ್ರಾಮ ಮತ್ತು ಸರ್ವೆ ನಂ. 49/1, 49/2 ಬೇಗೂರು ಗ್ರಾಮ, ವಾರ್ಡ್ ನಂ. 192, ಬೇಗೂರು ಉಪವಿಭಾಗ, ಬೊಮ್ಮನಹಳ್ಳಿ ವಲಯ, ಬೆಂಗಳೂರು ಇಲ್ಲಿ ನಿರ್ಮಿಸುತ್ತಿರುವ ವಸತಿ ಸಮುಚ್ಚಯ ಮತ್ತು Amenities Block ಕಟ್ಟಡಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

ಉಲ್ಲೇಖ: 1) ತಮ್ಮ ಮನವಿ ಪತ್ರ ದಿನಾಂಕ: 08-12-2022 ಮತ್ತು 30-01-2023.

2) ಪರಿಷ್ಕೃತ ನಕ್ಷೆ ಮಂಜೂರಾತಿ ಎಲ್.ಪಿ ಸಂಖ್ಯೆ: JDTP(S)/ LP/77/10-11 ದಿನಾಂಕ: 02-01-2020

3) ಅಪರ ನಿರ್ದೇಶಕರು, ನಗರ ಯೋಜನೆ ರವರ ಅನುಮೋದನೆ ದಿನಾಂಕ: 22-02-2023.

*****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಮನವಿಯಲ್ಲಿ ಖಾತಾ ಸಂಖ್ಯೆ. 21, ಸರ್ವೆ ನಂ. 40/1, 2, 3, 4, 5, 6 & 41/1, 2, 3, 4, 7, 42/5, ಯಳೇನಹಳ್ಳಿ ಗ್ರಾಮ ಮತ್ತು ಸರ್ವೆ ನಂ. 49/1, 49/2 ಬೇಗೂರು ಗ್ರಾಮ, ವಾರ್ಡ್ ನಂ. 192, ಬೇಗೂರು ಉಪವಿಭಾಗ, ಬೊಮ್ಮನಹಳ್ಳಿ ವಲಯ, ಬೆಂಗಳೂರು ಇಲ್ಲಿ ನಿರ್ಮಿಸುತ್ತಿರುವ ಭಾಗಶಃ 2ನೇ ತಳ ಅಂತಸ್ತು ಮತ್ತು ಮೊದಲನೇ ಸಾಮಾನ್ಯ ತಳ ಮಹಡಿಯೊಂದಿಗೆ ಬ್ಲಾಕ್ – 1 ವಿಂಗ್ – ಎಫ್ ರಲ್ಲಿ ನೆಲ + ಮೇಲಿನ 13 ಅಂತಸ್ತುಗಳ 54 ಘಟಕಗಳು, ಬ್ಲಾಕ್ – 2 ವಿಂಗ್ – ಹೆಚ್ ರಲ್ಲಿ ನೆಲ + ಮೇಲಿನ 13 ಅಂತಸ್ತುಗಳ 54 ಘಟಕಗಳು, ಬ್ಲಾಕ್ – 3 ವಿಂಗ್ – ಜಿ1, ಜಿ2, ಜಿ3, ಜಿ4, ಜಿ5, ಜಿ6 ಮತ್ತು ಜಿ7 ರಲ್ಲಿ ನೆಲ + ಮೇಲಿನ 13 ಅಂತಸ್ತುಗಳ 486 ಘಟಕಗಳು ಮತ್ತು ಬ್ಲಾಕ್ – 4 Amenities Block ರಲ್ಲಿ ನೆಲ + ಮೇಲಿನ 3 ಅಂತಸ್ತುಗಳು ಒಟ್ಟಾರೆಯಾಗಿ Amenities Block ನೊಂದಿಗೆ 594 ಘಟಕಗಳುಳ್ಳ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಕೋರಿರುತ್ತಾರೆ. ಉಲ್ಲೇಖ (2) ರಂತೆ ಸದರಿ ಕಟ್ಟಡಕ್ಕೆ ಈ ಕಛೇರಿಯಿಂದ ಎಲ್.ಪಿ. ಸಂಖ್ಯೆ: JDTP(S)/ LP/77/10-11 ದಿನಾಂಕ: 02-01-2020 ರಂದು ಪರಿಷ್ಕೃತ ನಕ್ಷೆ ಮಂಜೂರಾತಿಯನ್ನು ನೀಡಲಾಗಿರುತ್ತದೆ.

ವಸತಿ ಸಮುಚ್ಚಯ ಮತ್ತು Amenities Block ಕಟ್ಟಡಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಪ್ರಸ್ತಾವನೆಗೆ ಉಲ್ಲೇಖ (3) ರಂತೆ ಅಪರ ನಿರ್ದೇಶಕರು, ನಗರ ಯೋಜನೆ ರವರು ಅನುಮೋದಿಸಿದ ಮೇರೆಗೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಂಬಂಧ ಅಗತ್ಯ ಶುಲ್ಕವಾದ ರೂ. 3,59,000/- ಗಳನ್ನು ಅರ್ಜಿದಾರರಿಂದ ರಶೀದಿ ಸಂಖ್ಯೆ: RE-ifms624-TP/000070 ದಿನಾಂಕ: 24-02-2023 ರಂದು ಸಂದಾಯಿಸಿಕೊಳ್ಳಲಾಗಿದೆ. ಆದುದರಿಂದ ವಸತಿ ಸಮುಚ್ಚಯ ಮತ್ತು Amenities Block ಕಟ್ಟಡಕ್ಕೆ ಈ ಕೆಳಕಂಡ ಷರತ್ತಿಗೊಳಪಡಿಸಿ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲಾಗಿದೆ.

V. 27/2/23

ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

2/3/23

True Copy

24/2/23 24/2/23 24/2/23

1) ಕಟ್ಟಡದ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.

2) ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ, ಯಾವುದೇ ತೊಂದರೆ ಆಗದಂತೆ ಕಟ್ಟಡ ನಿರ್ಮಾಣ ಕೈಗೊಳ್ಳುವುದು ಹಾಗೂ ಕೆಲಸಗಾರರ ವಸತಿಗಾಗಿ ತಾತ್ಕಾಲಿಕ ಶೆಡ್ ಮತ್ತು ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.

3) ಪರಿಷ್ಕೃತ ನಕ್ಷೆ ಮಂಜೂರಾತಿಯ ಸಿಂಧುತ್ವವು ಅನುಮೋದನೆ ನೀಡಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ಮಾನ್ಯತೆ ಹೊಂದಿದ್ದು, ಈ ಅವಧಿಯೊಳಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

4) ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಮಂಜೂರಾತಿ ನೀಡುವ ಪ್ರಾಧಿಕಾರದವರಿಗೆ ಮಾಹಿತಿಯನ್ನು ನೀಡಿ ಪರಿಷ್ಕೃತ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.

5) ಅಭಿವೃದ್ಧಿದಾರರು / ಮಾಲೀಕರು / ವಾಸ್ತುಶಿಲ್ಪಿಯವರು ಪರಿಷ್ಕೃತ ನಕ್ಷೆ ಮಂಜೂರಾತಿ ನೀಡಿದ ಸಮಯದಲ್ಲಿ ವಿಧಿಸಿರುವ ಷರತ್ತುಗಳಿಗೆ ಬದ್ಧರಿರತಕ್ಕದ್ದು.

6) ಅಭಿವೃದ್ಧಿದಾರರು / ಮಾಲೀಕರು / ವಾಸ್ತುಶಿಲ್ಪಿಯವರು ಪ್ರಾರಂಭಿಕ ಪ್ರಮಾಣಪತ್ರ ಅನುಮೋದಿಸುವ ಸಮಯದಲ್ಲಿ ವಿಧಿಸಿರುವ ವಿಶೇಷ ಷರತ್ತಿಗೆ ಬದ್ಧರಿರತಕ್ಕದ್ದು.

ಸಹಿ/-
ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗೆ
M/s. SNN Builders Pvt. Ltd., Rep by Director
Sri. Sha Sanjay (Khatha Holder)
3rd Floor, Potential House, # 35/B,
First Main Road, 3rd Phase, JP Nagar,
Bangalore – 560 078.

ಪ್ರತಿಯನ್ನು: ಕಾರ್ಯಪಾಲಕ ಅಭಿಯಂತರರು (ಬೆಂಗಳೂರು ದಕ್ಷಿಣ ವಲಯ) ವಿಭಾಗ/ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೇಗೂರು ಉಪ ವಿಭಾಗ ರವರಿಗೆ ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ.

V. 27/2/23
ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
24/02/23 TS 24/02/23 24/2

Received 27/2/23